ದೂರವಾಣಿ : 0836-2215328

NAAC Accredited with "A" Grade-2022

Pavate Nagar, Dharwad-580 003

Karnatak-India

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

KARNATAK UNIVERSITY, DHARWAD

ಶಿಷ್ಯವೇತನ ವಿಭಾಗ

SCHOLARSHIP SECTION

scholarship@kud.ac.in

Website: www.kud.ac.in

Phone : 0836-2215328

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಪಾವಟೆನಗರ, ಧಾರವಾಡ- 580003

ಕರ್ನಾಟಕ - ಭಾರತ

ನಂ.ಕವಿವಿ/ಶಿಷ್ಯವೇತನ/2026/520 ದಿನಾಂಕ: 01 JUL 2026

# ಅಧಿಸೂಚನೆ

**ವಿಷಯ:** ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿವೇತನ (URS) ಮಂಜೂರಾತಿ ಕುರಿತು.

**ಉಲ್ಲೇಖ:** 1) KU/Synd/Statute/Scholarship/2002-03/241, Dated: 21.11.2002.
2) Ref No: KU. Syndicate/Statute/Sch/2011-12/1857 Dated: 02.12.2011.
3) Ref No. KU-Regr/2017-18/A3889 Dated: 19.12.2017.
4) Ref No. KU/Aca/Ph.D./ASO/2024-25/18, Dated: 16.04.2025.
5 ) Vice-Chancellor's Order Dated: 23.06.2026.

*****

**1. ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿವೇತನ ಮಂಜೂರಾತಿ ಕುರಿತು:-**

ಸನ್ 2025-26 ನೇ ಸಾಲಿಗಾಗಿ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿವೇತನವನ್ನು ಪ್ರತಿಭೆಯ ಆಧಾರದ ಮೇಲೆ ಮಂಜೂರು ಮಾಡುವುದಕ್ಕಾಗಿ ಪೂರ್ಣಾವಧಿ ಪಿ.ಎಚ್.ಡಿ. ಮತ್ತು ಎಂ.ಫಿಲ್. ಸಂಶೋಧನಾ ಅಧ್ಯಯನಕ್ಕೆ 2025-26 ನೇ ಸಾಲಿನಲ್ಲಿ ಹೆಸರುಗಳನ್ನು ನೊಂದಾಯಿಸಿದ ಅರ್ಹ ಸಂಶೋಧನಾ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ವಿವರಗಳು:-**

ಸಂಶೋಧನಾ ವಿದ್ಯಾರ್ಥಿವೇತನಗಳ ಸಂಖ್ಯೆ :

i) ಎಂ.ಫಿಲ್‌ಗೆ - 05 ಸೀಟ್‌ಗಳು

ii) ಪಿಎಚ್.ಡಿಗೆ - 72 ಸೀಟ್‌ಗಳು

ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿವೇತನಕ್ಕೆ ನಿಗದಿಪಡಿಸಲಾದ ನಿಖಾಯವಾರು ಜೇಷ್ಠತೆ ಮೇರೆಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಒಂದು ವೇಳೆ ಸದರಿ ವರ್ಗವಾರು(Category) ವಿದ್ಯಾರ್ಥಿಗಳಿಂದ ಅರ್ಹ ಅರ್ಜಿಗಳು ಬಾರದಿದ್ದಲ್ಲಿ ಅಂತಹ ಸಂಶೋಧನಾ ವಿದ್ಯಾರ್ಥಿವೇತನವನ್ನು ಮೀಸಲಾಗಿಲ್ಲವೆಂದು ಪರಿಗಣಿಸಿ ಇನ್ನಿತರ ವರ್ಗಗಳ ಅರ್ಹ ವಿದ್ಯಾರ್ಥಿಗಳಿಗೆ ನೀಡಲಾಗುವದು. ಅದೇ ರೀತಿ ಒಂದು ವೇಳೆ ಮೀಸಲಿರಿಸಿದ ನಿಖಾಯಗಳಿಂದ ನಿರ್ದಿಷ್ಟ ಅರ್ಜಿಗಳು ಬಾರದಿದ್ದಲ್ಲಿ ಅಂತಹ ಸಂಶೋಧನಾ ವಿದ್ಯಾರ್ಥಿವೇತನವನ್ನು ಹೆಚ್ಚು ಅರ್ಜಿಗಳು ಬಂದಿರುವ ನಿಖಾಯಗಳಿಗೆ ಸ್ಥಳಾಂತರಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗುವುದು.

**1. <u>ಅರ್ಹತೆಯ ನಿಯಮಗಳು:-</u>**

**ಅ) 1. ಪಿಎಚ್.ಡಿ:-** ಪಿಎಚ್.ಡಿ .ವಿದ್ಯಾರ್ಥಿವೇತನ ಪಡೆಯಲು ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ಕನಿಷ್ಠ ಪ್ರತಿಶತ 55 ಅಂಕಗಳನ್ನು ಪಡೆದು ಉತ್ತೀರ್ಣತರಾಗಿರಬೇಕು.

**2. ಎಂ.ಫಿಲ್:-** ಎಂ.ಫಿಲ್.ವಿದ್ಯಾರ್ಥಿವೇತನ ಪಡೆಯಲು ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ಕನಿಷ್ಠ ಪ್ರತಿಶತ 50 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

**ಆ)** ಸ್ನಾತಕೋತ್ತರ ಪದವಿ ಪರೀಕ್ಷೆಯನ್ನು ಮರು ಪ್ರಯತ್ನವಿಲ್ಲದೆ ಮತ್ತು ನಿಗದಿಪಡಿಸಿದ ಅವಧಿಯಲ್ಲಿ ಪಾಸಾಗಿರಬೇಕು.

**ಇ)** ವಿದ್ಯಾರ್ಥಿಗಳು ಪೂರ್ಣಾವಧಿಗೆ ಸಂಶೋಧನಾ ಅಧ್ಯಯನ ಕೈಕೊಳ್ಳಬೇಕು ಅಂದರೆ ಅರೆಕಾಲಿಕವಾಗಿ ಅಥವಾ ಪೂರ್ಣಕಾಲಿಕವಾಗಿ ಯಾವುದೇ ವೃತ್ತಿಯಲ್ಲಿ ಇರಬಾರದು ಮತ್ತು ಸದರ ಸಂಶೋಧನಾ ವಿದ್ಯಾರ್ಥಿವೇತನದ ಅವಧಿಯಲ್ಲಿ ಯಾವುದೇ ಮೂಲದಿಂದ ಸಂಭಾವನೆ, ವೇತನ ಸ್ಟೈಪೆಂಡ್ ಇತ್ಯಾದಿ\ ಪಡೆಯುತ್ತಿರಬಾರದು.

**ಈ)** ಪಿ.ಎಚ್.ಡಿ. ನೊಂದಣಿ ಪಡೆದು ಶಿಷ್ಯವೇತನ ಪಡೆಯುತ್ತಿರುವ ಸಂಶೋಧನಾ ವಿದ್ಯಾರ್ಥಿಗಳು ಪಿಎಚ್.ಡಿ. ಅಧ್ಯಯನ ಮುಂದುವರೆಸಿ ಮಹಾಪ್ರಬಂಧ ಮಂಡಿಸದೇ ಕಾರಣಾಂತರಗಳಿಂದ ಅರ್ಧಕ್ಕೆ ಮೊಟಕುಗೊಳಿಸಿ ಪಿ.ಎಚ್.ಡಿ. ನೊಂದಣಿ ರದ್ದುಪಡಿಸುವ ಸಂದರ್ಭದಲ್ಲಿ ವಿದ್ಯಾರ್ಥಿಯು ಶಿಷ್ಯವೇತನ ಪಡೆದಿರಬಹುದಾದ ಮೊತ್ತವನ್ನು ಮರುಭರಣ ಮಾಡಿಕೊಳ್ಳಲಾಗುವುದು ಹಾಗೂ ವಿದ್ಯಾರ್ಥಿಯು ಶಿಷ್ಯವೇತನ ಮೊತ್ತವನ್ನು ಮರುಭರಣ ಮಾಡಲು ನಿರಾಕರಿಸಿದ್ದಲ್ಲಿ ಕುಟುಂಬದ ಆದಾಯದಲ್ಲಿ ಮರುಭರಣ ಮಾಡಿಕೊಳ್ಳಲಾಗುವುದು ಇದೂ ಕಾರ್ಯಗತವಾಗದಿದ್ದಲ್ಲಿ ಸಂಬಂಧಿಸಿದ ಪೋಲಿಸ್ ಸ್ಟೇಶನ್‌ನಲ್ಲಿ ದೂರು ದಾಖಲಿಸಲಾಗುವುದು.

ಪು.ತಿ.ನೋ.

**2. ಸಂಶೋಧನಾ ವಿದ್ಯಾರ್ಥಿ ವೇತನಗಳ ಅವಧಿ:-**

| ಅ ನಂ | ಪದವಿ | ವಿದ್ಯಾರ್ಥಿವೇತನ ತಿಂಗಳ ದರ |
|---|---|---|
| 1 | ಪಿಎಚ್.ಡಿ. (Ph.D.)<br>(03 ವರ್ಷದ ಅವಧಿಗೆ ಮಾತ್ರ) | ನೋಂದಣಿ ದಿನಾಂಕದಿಂದ<br>ರೂ. 6000/- ರಂತೆ ಪ್ರತಿ ತಿಂಗಳಿಗೆ, ಮೂರು ವರ್ಷದ ಅವಧಿಗೆ |
| 2 | ಎಂ.ಫಿಲ್.(M.Phil.)<br>(1 ವರ್ಷದ ಅವಧಿಗೆ ಮಾತ್ರ) | ನೋಂದಣಿ ದಿನಾಂಕದಿಂದ<br>ರೂ. 4000/- ರಂತೆ ಪ್ರತಿ ತಿಂಗಳಿಗೆ, ಒಂದು ವರ್ಷದ ಅವಧಿಗೆ |

**ವಿಶೇಷ ಸೂಚನೆ:**

ಅ) ಈ ಮೇಲಿನ ಸಂಶೋಧನಾ ವಿದ್ಯಾರ್ಥಿವೇತನಕ್ಕೆ ಯಾವುದೇ ಸಾದಿಲ್ವಾರ ವೆಚ್ಚವನ್ನುನೀಡಲಾಗುವುದಿಲ್ಲ.

ಆ) ಸದರ ಶಿಷ್ಯವೇತನವು ಸಾಮಾನ್ಯ ವರ್ಗ ( GM), ಪ್ರವರ್ಗ-I (Cat-I) ಮತ್ತು ಹಿಂದುಳಿದ ಮತ್ತು ಅಲ್ಪಸಂಖ್ಯಾ (OBC) ತರ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುವುದು.

3. ಅ) ಅರ್ಹ ವಿದ್ಯಾರ್ಥಿಗಳು ಅವರ ಸಂಶೋಧನಾ ಮಾರ್ಗದರ್ಶಕರ ಹಾಗೂ ವಿಭಾಗದ ಮುಖ್ಯಸ್ಥರ ಮುಖಾಂತರ ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು.

ಆ) ಶಿಷ್ಯವೇತನ ವಿಭಾಗದಿಂದ ನಿಗದಿಪಡಿಸಿದ ನಮೂನೆಯ ಅರ್ಜಿಗಳನ್ನು ಪಡೆದುಕೊಂಡು ಸಂಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಗಳನ್ನು ತಮ್ಮ ವಿಭಾಗದ ಮುಖ್ಯಸ್ಥರ ಮುಖಾಂತರ ಶಿಷ್ಯವೇತನ ವಿಭಾಗಕ್ಕೆ ಸಲ್ಲಿಸುವುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:31-07-2026(ಕಚೇರಿ ವೇಳೆಯಲ್ಲಿ ಸಲ್ಲಿಸತಕ್ಕದ್ದು)

4. **ಅರ್ಜಿಯ ಜೊತೆಗೆ ಲಗತ್ತಿಸಬೇಕಾದ ದಾಖಲಾತಿಗಳ ದೃಢೀಕೃತ ಪ್ರತಿಗಳು.**

ಅ) ಸ್ನಾತಕೋತ್ತರ ಪದವಿ ಪರೀಕ್ಷೆಗಳ ಎಲ್ಲ ಸೇಮಿಸ್ಟರಗಳ ಝರಾಕ್ಸ ಅಂಕಪಟ್ಟಿಗಳ ದೃಡಿಕರಣ ಪ್ರತಿಗಳನ್ನು ಲಗತ್ತಿಸುವುದು.

ಆ) ಪಿಎಚ್.ಡಿ./ಎಂ.ಫಿಲ್. ವ್ಯಾಸಂಗಕ್ಕೆ ಹೆಸರು ನೋಂದಾಯಿಸಿದ ಪ್ರಮಾಣ ಪತ್ರ , ಎಂ.ಫೀಲ್. ವಿದ್ಯಾರ್ಥಿಗಳು ಶುಲ್ಕ ತುಂಬಿದ ಪಾವತಿಗಳನ್ನು ಲಗತ್ತಿಸಬೇಕು.

ಇ) ಪಿಎಚ್.ಡಿ. ಕೋರ್ಸ್ ವರ್ಕ ನ ಅಂಕಪಟ್ಟಿಯನ್ನು ಲಗತ್ತಿಸುವುದು.(ಅಂಕಪಟ್ಟಿ ಲಭ್ಯವಿದ್ದಲ್ಲಿ)

ಈ) ಜನ್ಮ ದಿನಾಂಕ ಖಚಿತಪಡಿಸುವ ಶಾಲಾ ಪ್ರಮಾಣ ಪತ್ರ ಲಗತ್ತಿಸಬೇಕು.

ಉ) ಅಂಗವಿಕಲ ವಿದ್ಯಾರ್ಥಿಗಳು ಜಿಲ್ಲಾ ವೈಧ್ಯಾಧಿಕಾರಿಗಳಿಂದ ಪ್ರಮಾಣಿಸಲ್ಪಟ್ಟ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸಬೇಕು.

5. ನಿಗದಿಪಡಿಸಿದ ಅವಧಿ ಮೀರಿ ಬರುವ ಮತ್ತು ಅಪೂರ್ಣ ಮಾಹಿತಿಯನ್ನೊಳಗೊಂಡ ಅರ್ಜಿಗಳನ್ನು ಪರಿಗಣಿಸಲಾಗುವದಿಲ್ಲ.

6. ವಿದ್ಯಾರ್ಥಿವೇತನದ ಮಂಜೂರಾತಿಯನ್ನು ಕಾಲಕಾಲಕ್ಕೆ ನಿಗದಿಗೊಂಡ ಹಾಗೂ ನಿಗದಿತಗೊಳ್ಳುವ ವಿಶ್ವವಿದ್ಯಾಲಯದ ನಿಯಮಗಳಿಗೆ ಒಳಪಟ್ಟಿರುತ್ತದೆ.

30/6/26

**ಕುಲಸಚಿವರು**

**ಪ್ರತಿ ಮಾಹಿತಿಗಾಗಿ ಹಾಗೂ ಅವಶ್ಯಕ ಕ್ರಮಕ್ಕಾಗಿ:-**

1. ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು, ಕ.ವಿ.ವಿ. ಧಾರವಾಡ ಇವರ ಮಾಹಿತಿಗಾಗಿ ಹಾಗೂ ವಿದ್ಯಾರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ತಮ್ಮ ವಿಭಾಗದಿಂದ ಶಿಷ್ಯವೇತನ ವಿಭಾಗಕ್ಕೆ ಸಲ್ಲಿಸುವ ಕ್ರಮ ಕೈಗೊಳ್ಳುವುದು.
3. ಆಡಳಿತಾಧಿಕಾರಿಗಳು, ಸ್ನಾತಕೋತ್ತರ ಅಧ್ಯಯನ ಕೇಂದ್ರಗಳು, ಕಾರವಾರ/ಗದಗ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ.ಧಾರವಾಡ.
5. ಉಪಕುಲಸಚಿವರು, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ, ಕ.ವಿ.ವಿ. ಧಾರವಾಡ.
6. ವಿಶೇಷಾಧಿಕಾರಿಗಳು, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಘಟಕ, ಕ.ವಿ.ವಿ.ಧಾರವಾಡ.
7. ವಿಶೇಷಾಧಿಕಾರಿಗಳು, ಪ್ರವರ್ಗ-1 ಘಟಕ, ಕ.ವಿ.ವಿ.ಧಾರವಾಡ.
8. ನಿಲಯಪಾಲಕರು, ಎಲ್ಲ ಸ್ನಾತಕೋತ್ತರ ವಿದ್ಯಾರ್ಥಿಗಳ ವಸತಿ ನಿಲಯಗಳಿಗೆ, ಕ.ವಿ.ವಿ.ಧಾರವಾಡ.
9. ಉಪಕುಲಸಚಿವರು, ವಿದ್ಯಾಮಂಡಳ ವಿಭಾಗ, ಕ.ವಿ.ವಿ.ಧಾರವಾಡ (ವಿದ್ಯಾರ್ಥಿಗಳು ನಿಗದಿತ ಸಮಯದಲ್ಲಿ ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ ಪಿಎಚ್.ಡಿ./ಎಂ.ಫಿಲ್.ಗೆ ಹೆಸರು ನೋಂದಾಯಿಸಿದ ಬಗ್ಗೆ ನೊಂದಣಿ ಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡುವಂತೆ ಕ್ರಮ ಜರುಗಿಸಲು ತಿಳಿಸಲಾಗಿದೆ.)
10. ಅಧ್ಯಕ್ಷರುಗಳು, ವಿವಿಧ ಸಂಶೋಧನಾ ವಿದ್ಯಾರ್ಥಿಗಳ ಸಂಘಗಳು/ಒಕ್ಕೂಟ/ವೇದಿಕೆ, ಕ.ವಿ.ವಿ.ಧಾರವಾಡ.
11. ನಿರ್ದೇಶಕರು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕವಿವಿ, ಧಾರವಾಡ.